**ದಿನಾಂಕಃ 29.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀ.LN ರವರಿಂದಃ**

1) ನನ್ನ ವಯಸ್ಸಿಗೆ ಸಂಬಂಧಿಸಿದ ಹಾಗೆ ನಾನು ನನ್ನ ಚಾಲನಾ ಪರವಾನಗಿಯನ್ನು ಹಾಜರು ಮಾಡಿದ್ದೇನೆ.

2) ನನಗೆ **53** ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿದೆ ಮತ್ತು ನಾನು ನನಗೆ **53** ವರ್ಷ ವಯಸ್ಸಾಗಿದೆ ಎಂಬುದಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

3) ಅಪಘಾತದ ಸಮಯದಲ್ಲಿ ನಾನೇ ಲಾರಿಯನ್ನು ಅಂದರೆ ಕೆಎ**-01-AE-1645** ಸಂಖ್ಯೆಯ ಲಾರಿಯನ್ನು ಚಾಲನೆ ಮಾಡುತ್ತಾ ಇದ್ದೆನು.

4) ನನ್ನ ಲಾರಿಗೆ **IFFCO TOKIO** ವಿಮಾ ಸಂಸ್ಥೆಯಿಂದ ಪಾಲಿಸಿಯನ್ನು ಪಡೆದುಕೊಳ್ಳಲಾಗಿತ್ತು.

5) ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **10** ರಲ್ಲಿ ಲಾರಿಯ ಸಂಖ್ಯೆಯನ್ನು ಕೆಎ**-09-HR-1645** ಎಂದು ಬರೆಯಲಾಗಿದೆ ಎಂದರೆ ಅದು ತಪ್ಪಾಗಿ ಬರೆಯಲಾಗಿದೆ.

6) ಅಪಘಾತದಲ್ಲಿ ಮರಣ ಹೊಂದಿದಂತಹ ವ್ಯಕ್ತಿಯು ಅಪಘಾತ ಸಮಯದಲ್ಲಿ ಮದ್ಯಪಾನ ಮಾಡಿದ್ದನು ಎನ್ನುವ ಸಂಬಂಧ ನಾನು ಯಾವುದೇ ದಾಖಲೆಗಳನ್ನು ಕೊಟ್ಟಿರುವುದಿಲ್ಲ.

7) ನಿ.ಪಿ.**4** ಎಂದು ಗುರುತು ಆಗಿರುವ ದಾಖಲೆಯ ಪ್ರಕಾರ ಅಪಘಾತ ಆದ ಸ್ಥಳಕ್ಕಿಂತ ತುಂಬಾ ದೂರದಲ್ಲಿ ಎಂ.ಆರ್.ಪಿ ಬಾರ್ ಇದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಆ ವ್ಯಕ್ತಿಯು ಮದ್ಯಪಾನ ಮಾಡಿ ನೇರವಾಗಿ ಹೋಗುತ್ತಿದ್ದವನು ಇದ್ದಕ್ಕಿದ್ದ ಹಾಗೆ ತಿರುಗಿದನು ಮತ್ತು ಆ ಕಾರಣದಿಂದ ಅಪಘಾತವು ಆಯಿತು" ಎಂದು ನುಡಿದಿದ್ದಾರೆ.

8) ಅಪಘಾತದ ಸಮಯದಲ್ಲಿ ಕೆಎ**-09-HR-1982** ಸಂಖ್ಯೆಯ ವಾಹನದ ಚಾಲಕನು ಬಾರಿನ ಸಮೀಪದಲ್ಲಿ ಹೋಗುತ್ತಾ ಇರಲಿಲ್ಲ ಮತ್ತು ನಾನು ನನ್ನ ಅನುಕೂಲಕ್ಕಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

9) ಅಪಘಾತದಲ್ಲಿ ಮರಣ ಹೊಂದಿದ ವ್ಯಕ್ತಿಗೆ ಚಾಲನಾ ಪರವಾನಗಿಯು ಇರಲಿಲ್ಲ ಎಂಬ ವಿಷಯದ ಬಗ್ಗೆ ನಾನು ಯಾರನ್ನೂ ವಿಚಾರಣೆ ಮಾಡುವುದಕ್ಕೆ ಹೋಗಿರುವುದಿಲ್ಲ.

10) ಕಡತದಲ್ಲಿ ಲಭ್ಯ ಇರುವ ಯಾವುದೇ ದಾಖಲೆಯಲ್ಲಿಯೂ ಸದರಿ ವ್ಯಕ್ತಿಯು ಅಪಘಾತದಲ್ಲಿ ಅಂದರೆ ಮರಣ ಹೊಂದಿದ ವ್ಯಕ್ತಿಯು ಮದ್ಯಪಾನ ಮಾಡಿದ್ದನು ಎಂಬುದಾಗಿ ಇರುವುದಿಲ್ಲ ಮತ್ತು ನನ್ನ ಅನುಕೂಲಕ್ಕಾಗಿ ಅಂತಹ ಒಂದು ಆಪಾದನೆಯನ್ನು ನಾನು ಹೇಳುತ್ತಾ ಇದ್ದೇನೆ ಎಂದರೆ ಸುಳ್ಳು.

11) ನನ್ನ ತಪ್ಪಿನಿಂದ ಅಪಘಾತವು ಆಗಿರುವುದಿಲ್ಲ ಮತ್ತು ಹಾಗಿದ್ದರೂ ಸಹಾ ನನ್ನ ವಿರುದ್ಧ ಪೊಲೀಸರು ಅಂತಿಮ ವರದಿಯನ್ನು ಹಾಕಿದ್ದಾರೆ ಎಂದು ಹೇಳಿ ನಾನು ಯಾವುದೇ ಪ್ರಕರಣವನ್ನು ಯಾವುದೇ ನ್ಯಾಯಾಲಯದಲ್ಲಿ ಸಲ್ಲಿಸಿರುವುದಿಲ್ಲ.

12) ಅಪಘಾತವು ಆದಂತಹ ಸಮಯದಲ್ಲಿ ಸದರಿ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಇತ್ತು.

13) ಪೊಲೀಸ್ ದಾಖಲೆಯಲ್ಲಿ ಇರುವ ಮಾಹಿತಿಯ ಪ್ರಕಾರ ಒಂದು ಆಟೋ ರಿಕ್ಷಾ ಅನ್ನು ನಾನು ಓವರ್ ಟೇಕ್ ಮಾಡಿದ್ದೇನೆ ಮತ್ತು ಆ ಸಂದರ್ಭದಲ್ಲಿ ರಸ್ತೆಯ ವಿರುದ್ಧ ದಿಕ್ಕಿಗೆ ನನ್ನ ವಾಹನವನ್ನು ಚಾಲನೆ ಮಾಡಿದ್ದೇನೆ ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಎಂದು ಬರೆಯಲಾಗಿದೆ ಎಂದರೆ ಸುಳ್ಳು.

14) ಅಪಘಾತಕ್ಕೆ ಸಂಬಂಧಪಟ್ಟ ಹಾಗೆ ಪೊಲೀಸರು ಮಾಡಿರುವಂತಹ ಕ್ರಿಮಿನಲ್ ಕೇಸು ಇವತ್ತಿಗೂ ಸಹಾ ಮೈಸೂರಿನ ನ್ಯಾಯಾಲಯದಲ್ಲಿ ನಡೆಯುತ್ತಾ ಇದೆ.

15) ಮೇಲೆ ಹೇಳಿದಂತಹ ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಮತ್ತು ನನ್ನ ತಪ್ಪಿನಿಂದಲೇ ಗುರುಪ್ರಸಾದ್ ಅವರು ಮರಣ ಹೊಂದಿದ್ದಾರೆ ಮತ್ತು ನನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

16) ಶವ ಪರೀಕ್ಷಾ ವರದಿಯಲ್ಲಿ ಅಂದರೆ ನಿ.ಪಿ.**7** ದಾಖಲೆಯಲ್ಲಿ ಇರುವ ಮಾಹಿತಿಯ ಪ್ರಕಾರ ಮೇಲೆ ಹೇಳಿದ ಗುರುಪ್ರಸಾದ್ ರವರ ಮರಣವು ಆತನ ತಲೆಗೆ ಬಿದ್ದಂತಹ ಬಲವಾದ ಗಾಯದ ಕಾರಣದಿಂದ ಸಂಭವಿಸಿದೆ ಎಂದು ಬರೆಯಲಾಗಿದೆ ಎಂದರೆ ಸುಳ್ಳು.

17) ನನ್ನ ತಪ್ಪಿನಿಂದಲೇ ಅಪಘಾತವು ಆಗಿದೆ ಮತ್ತು ಗುರುಪ್ರಸಾದ್ ರವರ ಮರಣವು ಸಂಭವಿಸಿದೆ ಮತ್ತು ನಾನು ಸುಳ್ಳು ಸಾಕ್ಷ್ಯವನ್ನು ಹೇಳುತ್ತಾ ಇದ್ದೇನೆ ಎಂದರೆ ಸುಳ್ಳು.

**<u>ಮರು ವಿಚಾರಣೆ: ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.